ಸಾಕ್ಷಿಯನ್ನು ದಿನಾಂಕಃ 10/08/2026 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಿಂದಃ**

ದಾವಾ ಶೆಡ್ಯೂಲ್ ನಲ್ಲಿ ಮನೆಗಳ ಅಳತೆ ತೋರಿಸಿರುವುದಿಲ್ಲ. ದಾವಾ ಆಸ್ತಿಯ ಅಳತೆಯ ಮೇಲೆ ಅದರ ಕಿಮ್ಮತ್ತು ಮಾಡಬೇಕೆಂದರೆ ಸರಿ. ದಾವಾ ಆಸ್ತಿಯ ಅಳತೆ ಇಲ್ಲದೆ ಇರುವುದರಿಂದ ಭಾಗ ಮಾಡಲು ಬರುವುದಿಲ್ಲ ಎಂದರೆ ಸಾಕ್ಷಿ ಒಟ್ಟಿನಲ್ಲಿ ಮನೆಯಲ್ಲಿ ಮೂರು ಭಾಗ ಮಾಡಿಕೊಡಿ ಎಂದು ಹೇಳುತ್ತಿದ್ದಾರೆ. ಎರಡು ಮನೆಯಲ್ಲಿ ಮೂರು ಭಾಗ ಆಗಿದೆ ಎಂದರೆ ಸಾಕ್ಷಿ ನಿಮಗೆ 75 ಪ್ರತಿಶತ ಕೊಟ್ಟಿದ್ದಾರೆ, ಮಲ್ಲೇಶಪ್ಪನಿಗೆ 75 ಪ್ರತಿಶತ ಕೊಟ್ಟಿದ್ದಾರೆ, ಸುಗಪ್ಪರವರಿಗೆ ಆ ಮನೆಯಲ್ಲಿ 75 ಪ್ರತಿಶತ ಕೊಟ್ಟಿದ್ದಾರೆ, ಮತ್ತೊಂದು ಮನೆಯಲ್ಲಿ 75 ಪ್ರತಿಶತ ಕೊಟ್ಟಿದ್ದಾರೆ. ಸಾಕ್ಷಿ ಸ್ವತಹಃ ಮುಂದುವರೆದು ನನ್ನ ಹೆಸರಿಗೆ ದಾಖಲೆ ಮಾಡಿಲ್ಲ ಎಂದು ಹೇಳುತ್ತಾರೆ. ಇದರ ಜೊತೆಗೆ ಜಮೀನು ಸಹ ಹಂಚಿಕೆ ಆಗಿದ್ದಾವೆ ಎಂದರೆ ಸರಿ. ಹಂಚಿಕೆ ಮಾಡುವಾಗ ಕಾಗದ ಮಾಡಿದ್ದಾರೆ. ಸಾಕ್ಷಿ ಸ್ವತಹಃ ಮುಂದುವರೆದು ನನ್ನ ಹೆಸರಿಗೆ ಹಚ್ಚಿಕೊಟ್ಟಿಲ್ಲ ಮತ್ತು ನಮ್ಮ ಮನೆ ಬಿದ್ದು ಹೋಗಿದೆ ಎಂದು ಹೇಳುತ್ತಾರೆ. ಪಾಲು ಮಾಡಿಕೊಂಡಿದ್ದು ಇದೆ ಪತ್ರ ಎಂದು ಕೇಳಲಾಗಿ ಸಾಕ್ಷಿ ಹೌದು ಎಂದು ಹೇಳಿದ್ದರಿಂದ ಅದನ್ನು ನಿಡಿಃ 1 ಎಂದು ಗುರುತಿಸಲಾಯಿತು. ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿಃ 1(ಎ) ಎಂದು ಗುರುತಿಸಲಾಯಿತು. ಆಸ್ತಿ ನಂ.5 ಮನೆಯಲ್ಲಿ ನಿಡಿಃ 1 ರ ಪ್ರಕಾರ ನಿಮಗೆ ಯಾವುದೇ ಹಿಸ್ಸೆ ಬಂದಿಲ್ಲ ಎಂದರೆ ಸರಿ. ನಿಡಿಃ 1 ರ ಪ್ರಕಾರ ಆಸ್ತಿ ನಂ.5 ರ ಉತ್ತರ ಭಾಗಕ್ಕೆ 38*9 ಸೂಗಿರಪ್ಪ ಇವರ ಪಾಲಿಗೆ ಬಂದಿದೆ ಎಂದರೆ ಸರಿ. ನಿಡಿಃ 1 ರ ಪ್ರಕಾರ ಆಸ್ತಿ ನಂ.5 ರ ದಕ್ಷಿಣ ಭಾಗಕ್ಕೆ 38*26 ಮಲ್ಲೇಶಪ್ಪ ಇವರ ಪಾಲಿಗೆ ಬಂದಿದೆ ಎಂದರೆ ಸರಿ. ಸದರಿ ಪಾಲು ಪತ್ರದ ಪ್ರಕಾರ ಮನೆ ನಂ.20 ಅಂದರೆ suit schedule B ಆಸ್ತಿಯಲ್ಲಿ ಉತ್ತರ ಭಾಗಕ್ಕೆ 25*46 ಬಂದಿದೆ ಎಂದರೆ ಸಾಕ್ಷಿ ಪಾಲು ಮಾಡುವ ಮುನ್ನ ಅಳತೆ ಹಾಕಿಲ್ಲ ಆದ್ದರಿಂದ ಸಮಪಾಲು ಬೇಕು ಎಂದು ಕೇಳುತ್ತಿದ್ದಾರೆ. ದಕ್ಷಿಣಕ್ಕೆ 25*17 ಸೂಗಿರಪ್ಪರವರಿಗೆ ಬಂದಿದೆ ಎಂದರೆ ಸಾಕ್ಷಿ ಅವರು

ಅಳತೆ ಹಾಕಿಲ್ಲ ಎಂದು ಹೇಳುತ್ತಾರೆ. ನಿಡಿಃ 1 ಕ್ಕೆ ಓದಿ ಸಹಿ ಮಾಡಿದ್ದೀರಿ ಎಂದರೆ ಸಾಕ್ಷಿ ನಂಬಿಕೆ ಮೇಲೆ ಸಹಿ ಮಾಡಿದ್ದೆನೆಂದು ಹೇಳುತ್ತಾರೆ. ಉಳಿದ ಆಸ್ತಿಗಳಲ್ಲಿ ನಿಮ್ಮ ಪಾಲಿಗೆ ಬಂದ ಆಸ್ತಿಗೆ ಹೆಸರು ಹಚ್ಚಿಕೊಂಡು ಉಳುಮೆ ಮಾಡುತ್ತಿದ್ದೀರಿ ಎಂದರೆ ಸರಿ. ನಿಮ್ಮ ಅಳತೆ ಪ್ರಕಾರ ನಿಡಿಃ 1 ನ್ನು ಮಾಡಿ ಅದರ ಪ್ರಕಾರ ಹಂಚಿಕೊಂಡಿದ್ದೀರಿ ಎಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲಿಗೆ ಕಾಲವಕಾಶ ಕೇಳಿದ್ದು ಆಲಿಸಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
10.08.2026
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**